ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.274/2020

| | | | |
|---|---|---|---|
| ಹೆಸರು | : | ರಘು ಎನ್ | ಸಿ .ಡಬ್ಲ್ಯೂ:2 |
| ತಂದೆ ಹೆಸರು | : | ನಾಗರಾಜು | ಪಿ .ಡಬ್ಲ್ಯೂ:1 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಎನ್ ಹೊಸಹಳ್ಳಿ | |

ಸಾಕ್ಷಿಯನ್ನು ದಿಃ 03-08-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯು ಮುಖ್ಯ ವಿಚಾರಣೆ **ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಮೃತ ರಾಮಯ್ಯ , ಗೌರಮ್ಮ , ನರಸಮ್ಮ ನನ್ನ ಸಂಬಂಧಿಕರು ಮತ್ತು ವಸಂತಕುಮಾರ್ ರವರು ಪರಿಚಯ .

ಸಾಕ್ಷಿಗೆ ಸ್ಥಳ ಪಂಚನಾಮೆ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು. ನಿಪಿ -1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ . ಪೊಲೀಸರು ನನ್ನ ಸಮಕ್ಷಮಗಳನ್ನು ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿಲ್ಲ .

ಸುಮಾರು 6 ವರ್ಷದ ಹಿಂದೆ ಯಾರೋ ಒಬ್ಬ ವ್ಯಕ್ತಿ ನನಗೆ ದೂರವಾಣಿ ಕರೆ ಮಾಡಿ ಅಪಘಾತ ವಾಗಿರುವ ವಿಚಾರ ತಿಳಿಸಿದರು . ನಾನು ಅಪಘಾತವಾದ ಸ್ಥಳಕ್ಕೆ ಹೋಗಿ ನೋಡಲಾಗಿ ಅದು ನಿಜವಾಗಿತ್ತು . ಅಪಘಾತ ಯಾರ ತಪ್ಪಿ ನಿಂದ ಮತ್ತು ಯಾವ ವಾಹನದ ತಪ್ಪಿ ನಿಂದ ಅಪಘಾತವಾಯಿತು ಎಂದು ಗೊತ್ತಿಲ್ಲ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ . ಸಾಕ್ಷಿಗೆ ಅಲ್ಲಗಳೆದ ಹೇಳಿಕೆಯನ್ನು ನಿಪಿ -2 ಎಂದು ಗುರುತಿಸಲಾಗಿದೆ .

ಆರೋಪಿತರನ್ನು ನೋಡಿದರೆ ಗುರುತಿಸಲಾಗುತ್ತದೆಯೇ ಎಂದರೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ . ಆರೋಪಿತರು ಗೈರು ಹಾಜರಿದ್ದು ಅವರ ವಿರುದ್ಧ ಉದ್ಘೋಷಣಾ ಆದೇಶ ಜಾರಿಯಾಗಿರುತ್ತದೆ . ವಾಹನಗಳನ್ನು ನೋಡಿದರೆ ಗುರುತಿಸಲಾಗುತ್ತದೆಯೇ ಎಂದರೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ